# ಸಾಮಾಜಿಕ ಮತ್ತು ಭಾವನಾತ್ಮಕ ಬೆಳವಣಿಗೆಯನ್ನು ಪೋಷಿಸುವುದರಲ್ಲಿ | ಕಲಾ ಶಿಕ್ಷಕರ ಪಾತ್ರ

ಶುಭಾ ಹೆಚ್.ಕೆ.



ವಿದ್ಯಾರ್ಥಿಗಳ ಸಮಗ್ರ ಬೆಳವಣಿಗೆಗೆ ಕೊಡುಗೆ ನೀಡುವಲ್ಲಿ ಕಲಾ ಶಿಕ್ಷಣವು ಪ್ರತ್ಯೇಕ ಸ್ಥಾನ ಪಡೆದಿದೆ. ಕ್ರಿಯಾಶೀಲತೆಯನ್ನು ಪೋಷಿಸುವುದರ ಜೊತೆಗೆ, ಕಲಾ ಚಟುವಟಿಕೆಗಳು ಸಾಮಾಜಿಕ ಮತ್ತು ಭಾವನಾತ್ಮಕ ಬೆಳವಣಿಗೆಗೆ ವೇದಿಕೆಯೊಂದನ್ನು ಒದಗಿಸುತ್ತವೆ. ಬುನಾದಿ ಹಂತದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (National Curriculum Framework for Foundational Stage - NCF-FS) ಸಾಮಾಜಿಕ, ಭಾವನಾತ್ಮಕ ಮತ್ತು ನೈತಿಕ ಕಲಿಕೆಯ ಕ್ಷೇತ್ರಗಳ (ಎಸ್.ಇ.ಇ.ಎಲ್) ವ್ಯಾಪ್ತಿಯಲ್ಲಿ ಸ್ಪಷ್ಟವಾದ ಪಠ್ಯಕ್ರಮದ ಗುರಿಗಳ ರೂಪುರೇಖೆಯನ್ನು ಕೊಟ್ಟಿದೆ. ಆದರೆ, ಸಾಂಪ್ರದಾಯಿಕ ವಿಷಯಗಳಂತಲ್ಲದೆ, ಸಾಮಾಜಿಕ–ಭಾವನಾತ್ಮಕ ಬೆಳವಣಿಗೆಯ ಕ್ಷೇತ್ರವು ಪ್ರತ್ಯೇಕ ತರಗತಿಗೆ ವಿಂಗಡಿತವಾಗಿಲ್ಲ. ಅದಕ್ಕೆ ಬದಲಾಗಿ ಅದನ್ನು ವಿವಿಧ ವಿಷಯಗಳಲ್ಲಿ ಸಮನ್ವಯಗೊಳಿಸಿ ಅನನ್ಯವಾದ ಸವಾಲು ಮತ್ತು ಅವಕಾಶವೊಂದನ್ನು ಕೊಡಮಾಡಲಾಗಿದೆ.

ಈ ಲೇಖನವು ಕಲಾ ಸಾಮರ್ಥ್ಯಗಳನ್ನು ಸಾಧಿಸುವ ಗುರಿಯುಳ್ಳ ನಿರ್ದಿಷ್ಟ ಚಟುವಟಿಕೆಗಳು ಮತ್ತು ವಿದ್ಯಾರ್ಥಿಗಳಲ್ಲಿ ಎಸ್.ಇ.ಇ.ಎಲ್. ಸಾಮರ್ಥ್ಯಗಳ ಬೆಳವಣಿಗೆಯ ಜೊತೆ ಇರಬಹುದಾದ ಅವುಗಳ ಪರಸ್ಪರ ಸಂಬಂಧಗಳ ನಡುವಿನ ಅಂತರ್‌ಸಂಬಂಧಗಳನ್ನು ಒಳ ಹೊಕ್ಕು ನೋಡುತ್ತದೆ. ಈ ಚಟುವಟಿಕೆಗಳು ಈ ಕೆಳಗಿನ ಸಾಮರ್ಥ್ಯಗಳ ಗುರಿಯನ್ನು ಹೊಂದಿವೆ:

C-12.1 ವಿವಿಧ ಗಾತ್ರಗಳ ಎರಡು–ಆಯಾಮ ಮತ್ತು ಮೂರು–ಆಯಾಮಗಳ ಕಲಾಕೃತಿಗಳನ್ನು ಸೃಷ್ಟಿಸಲು ವಿವಿಧ ಸಾಮಗ್ರಿಗಳೊಂದಿಗೆ ಆಟವಾಡುತ್ತ ಅನ್ವೇಷಿಸುವುದು.

C-12.2 ಸ್ವಂತ ಧ್ವನಿ, ದೇಹ, ವಲಯಗಳು ಮತ್ತು ವಿವಿಧ ವಸ್ತುಗಳೊಂದಿಗೆ ಆಟವಾಡಿ ಅನ್ವೇಷಿಸುವ ಮೂಲಕ ಸಂಗೀತ, ಪಾತ್ರಾಭಿನಯ, ನೃತ್ಯ ಮತ್ತು ಚಲನೆಗಳನ್ನು ಸೃಷ್ಟಿಸುವುದು.

**ಮೂಲ:** National Curriculum Framework for Foundational Stage. 2.4.5 Domain: Aesthetic and Cultural Development. **ಪುಟ. 63**

## ಚಟುವಟಿಕೆಗಳು

ಮೇಲೆ ನಮೂದಿಸಿದ ಎಸ್.ಇ.ಇ.ಎಲ್. ಸಾಮರ್ಥ್ಯಗಳನ್ನು ಸಾಧಿಸಲು ಒಂದನೇ ಮತ್ತು ಎರಡನೇ ತರಗತಿಯ ಮಕ್ಕಳಿಗೆ ಕಲಾ ತರಗತಿಯಲ್ಲಿ ಸೇರಿಸುವ ಕೆಲವು ಚಟುವಟಿಕೆಗಳು ಇಲ್ಲಿವೆ.

## ಸ್ವ-ವ್ಯಕ್ತಿಚಿತ್ರವೊಂದನ್ನು ಬಿಡಿಸುವುದು

ಮಕ್ಕಳಿಗೆ ತರಗತಿಯಲ್ಲಿರುವ ನಿಲುವುಗನ್ನಡಿಯೊಂದರಲ್ಲಿ ತಮ್ಮನ್ನು ತಾವು ನೋಡಿಕೊಂಡು ತಮ್ಮದೇ ಚಿತ್ರಗಳನ್ನು ಬಿಡಿಸಲು ಹೇಳಲಾಗುತ್ತದೆ. ಅವರಿಗೆ ತಮ್ಮ ಚಿತ್ರಗಳಲ್ಲಿ ಕೂದಲಿನ ಉದ್ದ, ಬಣ್ಣ ಮತ್ತು ತಾವು ಧರಿಸಿದ ವಸ್ತ್ರಗಳ ವಿವರಗಳನ್ನು ಕೂಡಾ ಸೇರಿಸುವಂತೆ ಪ್ರೋತ್ಸಾಹಿಸಲಾಗುತ್ತದೆ. ಈ ಚಿತ್ರಗಳನ್ನು ಅವರ ಕಣ್ಣಿನ ಮಟ್ಟದಲ್ಲಿ ಪ್ರದರ್ಶನಕ್ಕೆ ಇಡಲಾಗುತ್ತದೆ. ಎಲ್ಲರೂ ಎಲ್ಲಾ ಚಿತ್ರಗಳನ್ನೂ ನೋಡಿದ ಮೇಲೆ, ನಾವು ಪ್ರತಿಯೊಬ್ಬ ವಿದ್ಯಾರ್ಥಿಯನ್ನೂ ವಿಭಿನ್ನವಾಗಿಸುವ ಅನನ್ಯ ಗುಣಲಕ್ಷಣಗಳ ಬಗ್ಗೆಯೂ, ಎಲ್ಲರಲ್ಲಿಯೂ ಇರುವ ಸಮಾನವಾದ ಗುಣಲಕ್ಷಣಗಳ ಬಗ್ಗೆಯೂ ಚರ್ಚಿಸುತ್ತೇವೆ. ಈ ಚಟುವಟಿಕೆಯು ಮಕ್ಕಳಲ್ಲಿ ತಮ್ಮ ದೈಹಿಕ ರೂಪದ ಬಗ್ಗೆ ಯೋಚಿಸುವಂತೆ ಮಾಡುವುದಲ್ಲದೇ ಸ್ವ–ಅರಿವು, ಅಸ್ಮಿತೆಯ ರೂಪುಗೊಳ್ಳುವಿಕೆ ಮತ್ತು ಒಳಗೊಂಡ ಭಾವನೆಯನ್ನು ಕೂಡ ಮೂಡಿಸುತ್ತದೆ.

## ಕುಟುಂಬದ ಕೊಲಾಜ್ ತೇಪೆಚಿತ್ರ

ಪ್ರತಿಯೊಂದು ಮಗುವಿಗೂ ಒಂದು ಹಾಳೆ, ಒಂದು ಹಳೆ ನಿಯತಕಾಲಿಕೆ, ಕತ್ತರಿ ಮತ್ತು ಅಂಟನ್ನು ಕೊಟ್ಟು ತಮ್ಮ ಕುಟುಂಬದ ಸದಸ್ಯರನ್ನು ಹೋಲುವ ಚಿತ್ರಗಳನ್ನು ಕತ್ತರಿಸಿ ತೆಗೆದು ಅದರಲ್ಲಿ ಒಂದು ತೇಪೆ ಚಿತ್ರವನ್ನು (collage) ಮಾಡಲು ಹೇಳಲಾಗುತ್ತದೆ. ಪ್ರತೀ ವಿದ್ಯಾರ್ಥಿಯೂ ಆ ತೇಪೆಚಿತ್ರವನ್ನು ತರಗತಿಯಲ್ಲಿ ಹಂಚಿಕೊಂಡು ಪ್ರತೀ ಚಿತ್ರವನ್ನೂ ತೋರಿಸಿ ಆ ಚಿತ್ರದಲ್ಲಿರುವವರು ಯಾರು, ಅವರ ಹೆಸರು, ಸಂಬಂಧ ಮತ್ತು ಅವರೇನು ಮಾಡುತ್ತಾರೆ ಇಂತಹ ಇತರ ವಿವರಗಳನ್ನು ಹಂಚಿಕೊಳ್ಳಬೇಕು. ತಮ್ಮ ನಿಯತಕಾಲಿಕೆಯಲ್ಲಿ ಅವರಿಗೆ ಸರಿ ಹೊಂದುವ ಚಿತ್ರಗಳು ಸಿಗದೇ ಹೋದಲ್ಲಿ, ಅವರು ಸಹಪಾಠಿಗಳನ್ನು ತಮ್ಮ ನಿಯತಕಾಲಿಕಗಳಿಂದ ಚಿತ್ರಗಳನ್ನು ಹಂಚಿಕೊಳ್ಳಲು ಕೇಳಬಹುದು. ನಾವು ಈ ಚಟುವಟಿಕೆಯನ್ನು ಮಾಡಿದಾಗ, ವಿದ್ಯಾರ್ಥಿಗಳು ತಮ್ಮ ಕುಟುಂಬದ ಪ್ರತಿ ಸದಸ್ಯರುಗಳ ಬಗ್ಗೆ ಕೆಲವು ಪದಗಳನ್ನು ಅಥವಾ ವಾಕ್ಯಗಳನ್ನೂ ಸೇರಿಸಿದ್ದರು. ಮತ್ತು ತಮ್ಮ ಸಾಕುಪ್ರಾಣಿಗಳು ಮತ್ತು ತಮ್ಮ

ಮನೆಯಲ್ಲಿ ಬಹಳ ಇಷ್ಟವಾಗುವ ಜಾಗಗಳ ಬಗ್ಗೆಯೂ ಸೇರಿಸಿದ್ದರು. ಆಸಕ್ತಿಕರವಾಗಿ, ಕೆಲವು ಒಂದನೇ ತರಗತಿಯ ಮಕ್ಕಳು ತಮ್ಮ ತಂದೆಯ ಉದ್ಯೋಗದ ಬಗ್ಗೆ ತಿಳಿದಿರಲಿಲ್ಲ. ತಂದೆ ತಾಯಿಗಳ ಬಳಿ ಈ ವಿಷಯದ ಬಗ್ಗೆ ಕೇಳಿ ಮಾಹಿತಿಯನ್ನು ಹಂಚಿಕೊಳ್ಳಲು ಅವರಿಗೆ ತಿಳಿಸಲಾಯಿತು. ಮೊದಮೊದಲಿಗೆ, ಕೆಲವು ಎರಡನೇ ತರಗತಿಯ ವಿದ್ಯಾರ್ಥಿಗಳಿಗೆ ಮನೆಯನ್ನು ನೋಡಿಕೊಳ್ಳುವುದು, ಕೈದೋಟದ ಕೆಲಸ ಮತ್ತು ಮನೆಗೆಲಸ ಇಂಥ ಉದ್ಯೋಗಗಳನ್ನು ಹೇಳಿಕೊಳ್ಳಲು ಮನಸ್ಸಿರಲಿಲ್ಲ. ಹಾಗಾಗಿ, ಪ್ರತಿ ಉದ್ಯೋಗದ ಪ್ರಾಮುಖ್ಯತೆಯ ಬಗ್ಗೆ ಮತ್ತು ಹೇಗೆ ಪ್ರತಿ ವ್ಯಕ್ತಿಯ ಕೆಲಸ ಅವರ ಕುಟುಂಬಕ್ಕೆ ಕೊಡುಗೆ ನೀಡುತ್ತದೆ ಎಂಬ ಬಗ್ಗೆ ಒಂದು ಚರ್ಚೆ ನಡೆಯಿತು. ವಿದ್ಯಾರ್ಥಿಗಳು ಕಡೆಗೂ ವಿವರಗಳನ್ನು ಹಂಚಿಕೊಂಡರಾದರೂ, ಅವರಿಗೆ ತಮ್ಮ ಕುಟುಂಬದ ಸದಸ್ಯರ ವೃತ್ತಿಯ ಬಗ್ಗೆ ಮೆಚ್ಚುಗೆ ಮೂಡಲು ಇಂಥ ಹಲವಾರು ಚಟುವಟಿಕೆಗಳು ಮತ್ತು ಚರ್ಚೆಗಳನ್ನು ನಡೆಸಬೇಕಾಯಿತು. ಒಟ್ಟಾರೆಯಾಗಿ, ಈ ಚಟುವಟಿಕೆಯು ವಿದ್ಯಾರ್ಥಿಗಳಿಗೆ ತಮ್ಮ ಕುಟುಂಬದ ಜೊತೆ ಬಾಂಧವ್ಯದ ಭಾವನೆ ಬೆಳೆಸುವಲ್ಲಿ ಪಾತ್ರ ವಹಿಸಿತು.

## ಮನೆ, ಶಾಲೆ ಮತ್ತು ನೆರೆಹೊರೆ

ಶಿಕ್ಷಕರು ತಮ್ಮ ಸ್ಥಳದ ನಕಾಶೆಯೊಂದನ್ನು ತೋರಿಸುತ್ತಾರೆ – ಅದರಲ್ಲಿ ಅವರ ಮನೆ ಮತ್ತು ನೆರೆಹೊರೆಯನ್ನು ತೋರಿಸಿ, ಹೇಗೆ ಅವರು ಅವೆಲ್ಲಾ ಪ್ರಮುಖ ಜಾಗಗಳನ್ನು ದಾಟಿ ಶಾಲೆಯನ್ನು ತಲುಪುತ್ತಾರೆ ಎಂಬುದನ್ನು ವಿವರಿಸುತ್ತಾರೆ. ಶಿಕ್ಷಕರು ತಂದೆತಾಯಿಗಳ ಮತ್ತು ಇತರ ಕುಟುಂಬದ ಸದಸ್ಯರುಗಳ ದೂರವಾಣಿ ಸಂಖ್ಯೆ ಮತ್ತು ವಿಳಾಸವನ್ನು ಅರಿಯುವುದರ ಪ್ರಾಮುಖ್ಯತೆಯ ಬಗ್ಗೆ ಸಹ ಮಾತನಾಡುತ್ತಾರೆ. ವಿದ್ಯಾರ್ಥಿಗಳಿಗೆ ತಮ್ಮ ಪಾಲಕರೊಡನೆ ಮಾತನಾಡಿ ಈ ವಿವರಗಳನ್ನು ಪಡೆದುಕೊಳ್ಳಲು ಕೇಳಲಾಗುತ್ತದೆ. ಶಿಕ್ಷಕರು ಪ್ರತಿ ವಿದ್ಯಾರ್ಥಿಯೂ ತಮ್ಮ ಚಿತ್ರಪುಸ್ತಕದಲ್ಲಿ ತಮ್ಮ ನೆರೆಹೊರೆಯ ಪ್ರಮುಖ ಸ್ಥಳದ ಗುರುತುಗಳನ್ನು ಒಳಗೊಂಡ ಇಂಥದ್ದೇ ಒಂದು ನಕಾಶೆಯನ್ನು ಬಿಡಿಸಿ ಉಳಿದ ವಿದ್ಯಾರ್ಥಿಗಳಿಗೆ ಅದನ್ನು ವಿವರಿಸಲು ಕೇಳಲಾಗುತ್ತದೆ.


ವಿದ್ಯಾರ್ಥಿಗಳು ಈ ಚಟುವಟಿಕೆಯನ್ನು ಪೂರ್ಣಗೊಳಿಸಲು ಸಮಯ ತೆಗೆದುಕೊಳ್ಳುತ್ತಾರೆ; ವಿಳಾಸಗಳನ್ನು ಮತ್ತು ದೂರವಾಣಿ ಸಂಖ್ಯೆಗಳನ್ನು ನೆನಪಿಟ್ಟುಕೊಳ್ಳಲು ಅವರಿಗೆ ಅಭ್ಯಾಸ ಮತ್ತು ಪುನರುಚ್ಚಾರಣೆಯ ಹಾಗೂ ನಕಾಶೆಗಳನ್ನು ಬಿಡಿಸಲು ದಿಕ್ಕುಗಳ ಬಗೆಗಿನ ಸಹಾಯದ ಅಗತ್ಯವಿರುತ್ತದೆ. ನಮ್ಮ ವಿದ್ಯಾರ್ಥಿಗಳು ಈ ಚಟುವಟಿಕೆಯಲ್ಲಿ ಬಹಳ ಉತ್ಸಾಹದಿಂದ ಪಾಲ್ಗೊಂಡರು. ಎರಡನೆಯ ತರಗತಿಯ ವಿದ್ಯಾರ್ಥಿಗಳು ಕಳೆದು ಹೋದ ಮಗುವೊಂದು ಸರಿಯಾದ ವಿಳಾಸ ತಿಳಿದ ಕಾರಣ ಮರಳಿ ತನ್ನ ತಂದೆತಾಯಿಗಳೆಡೆಗೆ ಹಿಂದಿರುಗುವ ಸನ್ನಿವೇಶವೊಂದನ್ನು ನಟಿಸುವ ಮೂಲಕ ಈ ಚಟುವಟಿಕೆಯನ್ನು ವಿಸ್ತರಿಸಿದರು. ಈ ಚಟುವಟಿಕೆಯು ತಮ್ಮ ಸುತ್ತಮುತ್ತಲಿನ ಬಗ್ಗೆ ಅರಿವನ್ನು ಮೂಡಿಸಿಕೊಳ್ಳಲು ಮತ್ತು ಸಮುದಾಯದೊಳಗೆ ಒಂದಾದ ಭಾವನೆಯನ್ನು ಉಂಟುಮಾಡಲು ಸಹಾಯವಾಯಿತು.

## ಭಾವನಾತ್ಮಕ ಅಭಿನಯ

ಶಿಕ್ಷಕರು ಚಿಕ್ಕಚಿಕ್ಕ ಕಾರ್ಡುಗಳ ಮೇಲೆ ವಿವಿಧ ಭಾವನೆಗಳನ್ನು ಬರೆಯುತ್ತಾರೆ (ಸುಖ, ದುಃಖ, ಕೋಪ, ಆಶ್ಚರ್ಯ ಇತ್ಯಾದಿ) ಮತ್ತು ಪ್ರತಿ ವಿದ್ಯಾರ್ಥಿಯೂ ಒಂದು ಕಾರ್ಡನ್ನು ಹೆಕ್ಕಿ ತೆಗೆದು ಅದರಲ್ಲಿ ನಮೂದಿಸಿದ ಭಾವನೆಯನ್ನು ಮಾತಿಲ್ಲದೆ ನಟಿಸಿ ತೋರಿಸಬೇಕು. ಉಳಿದವರು ಅದು ಯಾವ ಭಾವನೆಯೆಂದು ಊಹಿಸಬೇಕು. ಅವರು ಕೆಲವು ನಿರ್ದಿಷ್ಟ ಭಾವನೆಗಳನ್ನು ಉದ್ರೇಕಿಸುವಂಥ ಸನ್ನಿವೇಶಗಳು ಮತ್ತು ಹೇಗೆ ಕೆಲವು ಮುಖಾಭಿವ್ಯಕ್ತಿಗಳು ಅಥವಾ ದೇಹ ಭಾಷೆಗಳು ನಿರ್ದಿಷ್ಟವಾದ ಭಾವನೆಗಳನ್ನು ತಿಳಿಸುತ್ತದೆ ಎಂಬುದನ್ನು ಚರ್ಚಿಸುತ್ತಾರೆ. ನಮ್ಮ ವಿದ್ಯಾರ್ಥಿಗಳು ತರಗತಿ ಮತ್ತು ಮನೆಯಲ್ಲಿನ ಕೆಲವು ಹಾಸ್ಯಮಯ ಪ್ರಸಂಗಗಳನ್ನು ಹಂಚಿಕೊಂಡರು. ದುಃಖದ ಸನ್ನಿವೇಶವನ್ನು ಹಂಚಿಕೊಳ್ಳುವಾಗ ಕೆಲವರು ಅತ್ತುಬಿಟ್ಟರು. ಒಬ್ಬ ವಿದ್ಯಾರ್ಥಿನಿ ದುಃಖವುಂಟುಮಾಡುವ ಯಾವುದನ್ನೂ ಹಂಚಿಕೊಳ್ಳಲು ಹಿಂಜರಿದಂತೆ ಕಂಡಾಗ ಆಕೆಗೆ ಯಾವುದಾದರೂ ಸರಳವಾದ ಪ್ರಸಂಗವನ್ನೇ, ಉದಾಹರಣೆಗೆ ಒಡಹುಟ್ಟಿದವ–ರೊಡನೆಯ ಜಗಳದಂಥದ್ದನ್ನೇ ಹಂಚಿಕೊಳ್ಳಲು ಪ್ರೇರೇಪಿಸ–ಲಾಯಿತು. ಹಾಗೆ ಆಕೆ ಮುಂದುವರಿದು ತನ್ನ ಅಜ್ಜಿಯ ಸಾವು ಹೇಗೆ ಅವಳ ಮೇಲೆ ಪ್ರಭಾವ ಬೀರಿದೆ ಮತ್ತು ಹೇಗೆ ಅಜ್ಜಿಯ ನೆನಪು ಬಹಳ ಕಾಡುತ್ತದೆ ಎಂಬುದನ್ನು ಹಂಚಿಕೊಂಡಳು. ಅವಳು ಅಳಲು ಶುರುಮಾಡಿಬಿಟ್ಟಳು ಮತ್ತು ಇತರ ಮಕ್ಕಳು ಅವಳನ್ನು ಸಂತೈಸಲು ತೊಡಗಿದರು. ಇದು ಬೇರೆ ಒಂದಷ್ಟು ಮಕ್ಕಳು ತಾವೂ ಸಹ ತಮಗೆ ದುಃಖವನ್ನುಂಟು ಮಾಡುವ ಅಥವಾ ಭಯವನ್ನುಂಟುಮಾಡುವ ಪ್ರಸಂಗಗಳನ್ನು ಹಂಚಿಕೊಳ್ಳುವಂತೆ ಮಾಡಿತು.

## ಕಥೆ ಹೇಳುವುದು ಮತ್ತು ಅಭಿನಯಿಸುವುದು

ಸರಳವಾದ, ಪ್ರಾಸಂಗಿಕವಾದ ಆಸಕ್ತಿಕರ ಪಾತ್ರಗಳುಳ್ಳ ಕಥೆಗಳನ್ನು ಸಮರ್ಪಕವಾದ ಧ್ವನಿಯ ಏರಿಳಿತ, ಮುಖಾಭಿವ್ಯಕ್ತಿ ಮತ್ತು ಪಠಣ ಶೈಲಿಯಿಂದ ನಿರೂಪಿಸಲಾಗುತ್ತದೆ. ಎಲ್ಲ ವಿದ್ಯಾರ್ಥಿಗಳಿಗೂ ಸರಿಯಾಗಿ ಅರ್ಥವಾಗಲೆಂದು ಈ ಕಥೆಗಳನ್ನು ಶಿಕ್ಷಕರು ಮತ್ತು ಕೆಲ ವಿದ್ಯಾರ್ಥಿಗಳು ಮತ್ತೊಮ್ಮೆ ಹೇಳುತ್ತಾರೆ ಅಥವಾ ಪುನಃ ಓದುತ್ತಾರೆ. ವಿದ್ಯಾರ್ಥಿಗಳನ್ನು ನಂತರ ಗುಂಪುಗಳಾಗಿ ವಿಂಗಡಿಸಲಾಗುತ್ತದೆ. ಪ್ರತಿ ಗುಂಪಿಗೂ ಸಂಭಾಷಣೆಗಳನ್ನು ಸೃಷ್ಟಿಸಲು, ಪಾತ್ರಗಳನ್ನು ನಿಯೋಜಿಸಲು ಮತ್ತು ಅಭಿನಯವನ್ನು ಅಭ್ಯಾಸ ಮಾಡಲು ಹೇಳಲಾಗುತ್ತದೆ. ಅವರಿಗೆ ರಂಗಸಾಮಗ್ರಿಗಳನ್ನೋ ಅಥವಾ ಲಭ್ಯ ಸಂಪನ್ಮೂಲಗಳನ್ನೋ ಒದಗಿಸಲಾಗುತ್ತದೆ. ಪ್ರತಿ ಗುಂಪೂ ತರಗತಿಯ ಎದುರು ಅವರ ಕಥೆಯನ್ನು ಅಭಿನಯಿಸಿ ತೋರಿಸಬೇಕು ಮತ್ತು ವಿದ್ಯಾರ್ಥಿಗಳನ್ನು ಆ ಗುಂಪಿನ




ಅಭಿವ್ಯಕ್ತಿಗಳು, ಸಂಭಾಷಣೆಯ ಪ್ರಸ್ತುತಿ, ರಂಗ ಸಾಮಗ್ರಿಗಳು ಮತ್ತು ಸನ್ನಿವೇಶಗಳಲ್ಲಿ – ಅವರಿಗೆ ಯಾವುದು ಇಷ್ಟವಾಯಿತು ಮತ್ತು ಏನನ್ನು ಇನ್ನೂ ಉತ್ತಮಗೊಳಿಸಬಹುದಿತ್ತು ಎಂಬುದರ ಬಗ್ಗೆ ಹಿಮ್ಮಾಹಿತಿ ಕೇಳಲಾಗುತ್ತದೆ.

ನಮ್ಮ ತರಗತಿಗಳಲ್ಲಿ ಈ ಚಟುವಟಿಕೆಯನ್ನು ನಿಯಮಿತವಾಗಿ ಮಾಡುತ್ತಾ ಬಂದಿದ್ದು ಇದು ಮಕ್ಕಳ ಸಾಮಾಜಿಕ ಮತ್ತು ಭಾವನಾತ್ಮಕ ಬೆಳವಣಿಗೆಗೆ ಪೂರಕವಾದ ಅತ್ಯುತ್ತಮ ಚಟುವಟಿಕೆಯೆಂದು ಸಾಬೀತಾಗಿದೆ. ಕಥೆಯಲ್ಲಿನ ಒಂದು ಪಾತ್ರವನ್ನು ನಿಯೋಜಿಸುವಾಗ ಗುಂಪಿನಲ್ಲಿ ಬಹಳ ಭಿನ್ನಾಭಿಪ್ರಾಯ ಮತ್ತು ಮಾತುಕತೆ ಸಂಧಾನಗಳು ನಡೆಯುತ್ತವೆ ಮತ್ತು ವಿದ್ಯಾರ್ಥಿಗಳು ಈ ಬಿಕ್ಕಟ್ಟುಗಳನ್ನು, ಕೆಲವೊಮ್ಮೆ ಶಿಕ್ಷಕರ ಸಣ್ಣ ಸಹಾಯದಿಂದ ಪರಿಹರಿಸಿಕೊಳ್ಳಬಲ್ಲರು. ನನಗೆ ಅವಳ ಪ್ರದರ್ಶನ ಇಷ್ಟ ಆಯಿತು, ಏಕೆಂದರೆ ಅವಳು ನನ್ನ ಗೆಳತಿ' ಎಂಬಂತಹ ಸಾಮಾನ್ಯ ಹಿಮ್ಮಾಹಿತಿಗಳಿಂದ ಹಿಡಿದು 'ದುಃಖದ ಸನ್ನಿವೇಶದಲ್ಲಿ ಅವನು ಮುಗುಳ್ನಗಬಾರದು' ಎಂಬ ರೀತಿಯ ಅಭಿವ್ಯಕ್ತಿಯ ಮತ್ತು ಅಭಿನಯದ ಕೌಶಲಗಳ ಬಗ್ಗೆ ಘನವಾದ ಅವಲೋಕನಗಳವರೆಗೆ ಸಾಗುತ್ತದೆ.

## ಪರಿಸಮಾಪ್ತಿ

ಈ ಚಟುವಟಿಕೆಗಳ ಮೂಲಕ ಕಲಾ ಸಾಮರ್ಥ್ಯಗಳನ್ನು ಸಾಧಿಸುವುದರ ಜೊತೆಗೆ, ವಿದ್ಯಾರ್ಥಿಗಳು ಈ ಕೆಳಕಂಡ ಎಸ್.ಇ.ಇ.ಎಲ್. ಸಾಮರ್ಥ್ಯಗಳನ್ನು ಸಹ ಸಾಧಿಸುತ್ತಾರೆ:

C-4.1 'ತನ್ನನ್ನು' ಒಂದು ಕುಟುಂಬದ ಮತ್ತು ಸಮುದಾಯದ ಒಂದು ಭಾಗವಾದ ವ್ಯಕ್ತಿಯೆಂದು ಗುರುತಿಸಿಕೊಳ್ಳಲು ಶುರು ಮಾಡುತ್ತಾರೆ.

C-4.2 ವಿವಿಧ ಭಾವನೆಗಳನ್ನು ಗುರುತಿಸುತ್ತಾರೆ ಮತ್ತು ಅವುಗಳನ್ನು ನಿಯಂತ್ರಿಸಲು ಉದ್ದೇಶಪೂರ್ವಕ ಪ್ರಯತ್ನಗಳನ್ನು ಮಾಡತೊಡಗುತ್ತಾರೆ.

**ಮೂಲ:** National Curriculum Framework for Foundational Stage. 2.4.5
**ಉಲ್ಲೇಖ:** Aesthetic and Cultural Development. **ಪುಟ. 60**

ಈ ಚಟುವಟಿಕೆಗಳಿಂದ ವಿದ್ಯಾರ್ಥಿಗಳ ಕಲಿಕೆಯನ್ನು ಮೌಲ್ಯಮಾಪನ ಮಾಡುವಾಗ ಶಿಕ್ಷಕರು ಕಲೆ ಮತ್ತು ಎಸ್.ಇ.ಇ.ಎಲ್ ಸಾಮರ್ಥ್ಯಗಳೆರಡನ್ನೂ ಪರಿಗಣಿಸ–ಬೇಕಾಗುತ್ತದೆ. ಉದಾಹರಣೆಗೆ, ಪಾತ್ರಾಭಿನಯದ ಸಮಯದಲ್ಲಿ, ವಿದ್ಯಾರ್ಥಿಗಳು ಕಲಾ ಸಾಮರ್ಥ್ಯವಾಗಿ ಹೇಗೆ ತಮ್ಮ ಧ್ವನಿ, ದೇಹ, ಪರಿಸರ ಮತ್ತು ರಂಗಸಜ್ಜಿಕೆಗಳನ್ನು ಅನ್ವೇಷಿಸುತ್ತಿದ್ದಾರೆ ಮತ್ತು ಅದೇ ಸಮಯದಲ್ಲಿ ಹೇಗೆ ತಮ್ಮ ಎಸ್.ಇ.ಇ.ಎಲ್. ಸಾಮರ್ಥ್ಯವಾಗಿ ಸಹಪಾಠಿಗಳೊಂದಿಗೆ ಸಹಯೋಗದಲ್ಲಿ ಕೆಲಸ ಮಾಡುತ್ತಾರೆ ಎಂಬುದನ್ನು ಶಿಕ್ಷಕರು ಗಮನಿಸಬೇಕಾಗುತ್ತದೆ.

ಮೇಲೆ ತಿಳಿಸಿದ ಚಟುವಟಿಕೆಗಳು ಕೇವಲ ಒಂದು ಸಣ್ಣ ಪ್ರಮಾಣದ ಉದಾಹರಣೆಗಳಷ್ಟೇ. ಕಲಾ ಪಠ್ಯಕ್ರಮದೊಡನೆ

ವ್ಯವಹರಿಸುವಾಗ, ಎಸ್.ಇ.ಇ.ಎಲ್‌ನ ಸಾಮರ್ಥ್ಯಗಳನ್ನು ಮತ್ತು ಕಲಿಕೆಯ ಸೂಚಿಕೆಗಳನ್ನು ನಿಯಮಿತವಾಗಿ ಪರಾಮರ್ಶಿಸಿ ಅದಕ್ಕೆ ತಕ್ಕಂತೆ ನಮ್ಮ ಕಾರ್ಯತಂತ್ರಗಳನ್ನು ಬದಲಾಯಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ. ತಮ್ಮ ಭಾವನೆಗಳನ್ನು ಹಿತವಾಗಿ ಹಂಚಿಕೊಳ್ಳಲು ಮತ್ತು ಆರೋಗ್ಯಕರ ಸಂಬಂಧಗಳನ್ನು ಬೆಳೆಸಿಕೊಳ್ಳಲು ವಿದ್ಯಾರ್ಥಿಗಳಿಗೆ ತಮ್ಮ ಆದ್ಯತೆಯ ಭಾಷೆಯಲ್ಲಿಯೇ ಅಭಿವ್ಯಕ್ತಿಸಲು ಅನುವು ಮಾಡಿಕೊಡುವುದು, ವಿದ್ಯಾರ್ಥಿಗಳೊಂದಿಗೆ ಅರ್ಥಪೂರ್ಣ ಬಾಂಧವ್ಯವನ್ನು ನಿರ್ಮಿಸಿಕೊಳ್ಳುವುದು, ಸಕಾರಾತ್ಮಕ ವಾತಾವರಣವೊಂದನ್ನು ಸೃಷ್ಟಿಸುವುದು ಮತ್ತು ಸುಸಂಗತವಾದ ವೇಳಾಪಟ್ಟಿ ಮತ್ತು ವ್ಯವಸ್ಥಿತ ಪರಿಸರವನ್ನು ನಿರ್ವಹಿಸುವುದು ಇವೇ ಮೊದಲಾದ ಇತರ ಅಂಶಗಳು ಕೂಡಾ ಅಷ್ಟೇ ಮುಖ್ಯವಾದವುಗಳಾಗಿವೆ.

ಒಳಗೊಳ್ಳುವಿಕೆಯನ್ನು ಒಪ್ಪಿಕೊಂಡು, ನಮ್ಮ ಶಾಲೆಯು ವಿವಿಧ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯುಳ್ಳ ಮತ್ತು ಬೇರೆಬೇರೆ ಮಟ್ಟದ ಮಾನಸಿಕ ಮತ್ತು ದೈಹಿಕ ಸಾಮರ್ಥ್ಯಗಳುಳ್ಳ ವಿದ್ಯಾರ್ಥಿಗಳನ್ನು ಸ್ವಾಗತಿಸುತ್ತದೆ. ಈ ವಿವಿಧತೆಯು ವಿದ್ಯಾರ್ಥಿಗಳು ಸಹಿಷ್ಣುಗಳಾಗಿರಲು, ಸಹಕಾರಿಗಳಾಗಲು ಮತ್ತು ಒಬ್ಬರಿಗೆ ಮತ್ತೊಬ್ಬರು ಬೆಂಬಲಿಸಲು ಕಲಿಯುವ ಪರಿಸರವನ್ನು ಪ್ರೋತ್ಸಾಹಿಸುತ್ತದೆ.



**ಶುಭಾ ಎಚ್.ಕೆ.** ಅವರು ಬೆಂಗಳೂರಿನ ಅಜೀಂ ಪ್ರೇಮ್‌ಜಿ ಶಾಲೆಯ ಉಪ ಪ್ರಾಂಶುಪಾಲರಾಗಿದ್ದಾರೆ. ಅವರು 2007ರಿಂದ ಅಜೀಂ ಪ್ರೇಮ್‌ಜಿ ಫೌಂಡೇಷನ್ ಜೊತೆಗಿದ್ದು, 12 ವರ್ಷಗಳ ಕಾಲ ವಲಸಿಗ ಕೂಲಿಕಾರ್ಮಿಕರ ಮಕ್ಕಳ ಎರಡು ಸೇತು ಕೇಂದ್ರಗಳನ್ನು ಮುನ್ನಡೆಸಿದ್ದು ಸೇರಿದಂತೆ  ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿದ್ದಾರೆ. ಬೇರೆಬೇರೆ ಸ್ಥಳಗಳಲ್ಲಿ ಅಜೀಂ ಪ್ರೇಮ್‌ಜಿ ಶಾಲೆಗಳ ಸ್ಥಾಪನೆ ಮತ್ತು ಅಲ್ಲಿನ ಪಠ್ಯಕ್ರಮವನ್ನು ವಿನ್ಯಾಸಗೊಳಿಸಿದ ಪ್ರಧಾನ ಗುಂಪಿನ ಸದಸ್ಯೆಯೂ ಆಗಿದ್ದರು. ಕರ್ನಾಟಕ ರಾಜ್ಯದ ಬುನಾದಿ ವರ್ಷಗಳ ಪಠ್ಯಕ್ರಮವನ್ನು ವಿನ್ಯಾಸ ಮಾಡಿ ಅದನ್ನು ಕಾರ್ಯಗತ ಮಾಡಲು ಅಂಗನವಾಡಿ ಶಿಕ್ಷಕರ ಸಾಮರ್ಥ್ಯ ಬೆಳೆಸಲು ಕೆಲಸ ಮಾಡಿದ ಗುಂಪಿನ ಸದಸ್ಯೆಯಾಗಿದ್ದರು. ಶುಭಾ ಅವರನ್ನು shubha@azimpremjifoundation.org ಮೂಲಕ ಸಂಪರ್ಕಿಸಬಹುದು.

ಅನುವಾದ: ಸ್ವಯಂಪ್ರಭ | ಪರಿಶೀಲನೆ: ಚಂದ್ರಶೇಖರ್ ಮಂಡೆಕೋಲು